ಸರಿ... ಮೂರೇ ಮೂರು ಜನ್ಮ ಸಾಕು' ಎಂದರು ವೈಕುಂಠದ ದ್ವಾರಪಾಲಕರಾದ ಜಯ ವಿಜಯರು.

'ತಥಾಸ್ತು' ಎಂದ ಮಹಾವಿಷ್ಣು. ಕೃತ ಯುಗದಲ್ಲಿ ಜಯ ವಿಜಯರು ಹಿರಣ್ಯಾಕ್ಷ ಹಿರಣ್ಯ ಕಶ್ಯಪುವಾಗಿ ಜನಿಸಿದರು. ಲೋಕ ಕಂಟಕರಾಗಿದ್ದ ಅವರನ್ನು ಮಹಾವಿಷ್ಣು ಕೊಂದ. ಭೂದೇವಿಯನ್ನು ಅಪಹರಿಸಿ ಒಯ್ಯುತ್ತಿದ್ದ ಹಿರಣ್ಯಾಕ್ಷನನ್ನು ಮಹಾವಿಷ್ಣು ವರಾಹ ಅವತಾರ ಎತ್ತಿ ಸಂಹರಿಸಿದ.ಆ ಮೂಲಕ ಭೂಮಾತೆಯನ್ನು ಸಂರಕ್ಷಿಸಿದ. ಮಹಾವಿಷ್ಣು ಪ್ರಹ್ಲಾದನ ಮೊರೆಯಂತೆ ನರಸಿಂಹಾವತಾರ ಎತ್ತಿ ಹಿರಣ್ಯ ಕಶ್ಯಪುವನ್ನು ಸಂಹರಿಸಿದ. ಭಕ್ತಪ್ರಹ್ಲಾದನನ್ನು ಪೊರೆದ. ತ್ರೇತಾಯುಗದಲ್ಲಿ ಜಯ ವಿಜಯರು ರಾವಣ ಕುಂಭಕರ್ಣರಾಗಿ ಜನಿಸಿದರು. ಶ್ರೀ ರಾಮಚಂದ್ರ ಇವರನ್ನು ವಧಿಸಿದ. ಸೀತಾಪಹಾರದ ಘೋರ ಕೃತ್ಯ ಎಸಗಿದ್ದ ರಾವಣನ್ನೂ,ಆತನ ತಮ್ಮ ಕುಂಭಕರ್ಣನನ್ನೂ ಶ್ರೀ ರಾಮಚಂದ್ರ ವಧಿಸಿದ. ಇದೀಗ ಈ ದ್ವಾಪರ ಯುಗದಲ್ಲಿ ಅದೇ ಜಯ ವಿಜಯರು ಸನಕ ಸನಂದಾದಿ ಮುನಿಗಳು ಕೊಟ್ಟ ಶಾಪದ ಪರಿಣಾಮವಾಗಿ ಮತ್ತು ಮಹಾವಿಷ್ಣು ನೀಡಿದ ಸಲಹೆಯ ಕಾರಣದಿಂದಾಗಿ ತಮ್ಮ ಮೂರನೆಯ ಜನ್ಮವನ್ನು ತಳೆದಿದ್ದಾರೆ ಶಿಶುಪಾಲ ಮತ್ತು ದಂತವಕ್ತ್ರರಾಗಿ...

'ಮತ್ತೇಕೆ ವಿಳಂಬಿಸುತ್ತಿದ್ದೀಯಾ ಕೃಷ್ಣಾ, ಇವನ ಕತೆ ಮುಗಿಸಿಬಿಡು' ಎಂದ ಭೀಮಸೇನ.

'ಆಗದು ವೃಕೋದರಾ... ಅದು ಆಗದು. ಇವನನ್ನು ವಧಿಸಲು ಸಮಯ ಬರಬೇಕಾಗಿದೆ. ಆ ಸಮಯಕ್ಕಾಗಿ ನಾನು ಕಾಯುತ್ತಿದ್ದೇನೆ' ನಸುನಗುತ್ತಾ ಅಂದೆ ನಾನು.

'ಸಮಯಕ್ಕಾಗಿ ಕಾಯುತ್ತಿದ್ದೀಯಾ? ಈ ದುಷ್ಟ, ದುರಹಂಕಾರಿಯನ್ನು ಕೊಲ್ಲಲು ಸಮಯಕ್ಕೆ ಕಾಯಬೇಕೇ? ಕಣ್ ಸನ್ನೆ ಮಾಡಿದರೆ ಸಾಕು... ನಿನ್ನ ಸುದರ್ಶನ ಚಕ್ರ ಆ ಕೆಲಸವನ್ನು ಕಣ್ಣೆವೆ ಇಕ್ಕುವ ಮೊದಲೇ ಮಾಡಿ ಮುಗಿಸುತ್ತದೆ' ಎಂದ ಭೀಮಸೇನ.

'ಅದೇನೋ ನಿಜವೇ ಭೀಮಸೇನಾ, ಆದರೆ... ಕೊಟ್ಟ ಮಾತನ್ನು ಉಳಿಸಿಕೊಳ್ಳಬೇಕಲ್ಲಾ...' ರಾಗ ಎಳೆದೆ ನಾನು.

'ಕೊಟ್ಟ ಮಾತು? ಯಾರಿಗೆ ಯಾರು ಕೊಟ್ಟ ಮಾತು? ಯಾವಾಗ ಕೊಟ್ಟ ಮಾತು? ಜಯ ವಿಜಯರಿಗೆ ಕೊಟ್ಟ ಮಾತಿನಂತೆ ಇವರೀರ್ವರ ಎರಡು ಜನ್ಮಗಳನ್ನು ಮುಗಿಸಲು ನೀನು ಕಾರಣನಾಗಿದ್ದೀಯೆ. ಇನ್ನು ಈ ಒಂದು ಜನ್ಮವನ್ನೂ ಮುಗಿಸಿಬಿಡು' ಎಂದ ಭೀಮಸೇನ.

'ನಿಜ ಭೀಮಸೇನಾ... ನಾನು ಇವರ ವಧೆಗೆ ವಿಳಂಬಿಸುತ್ತಿದ್ದೇನೆ. ಅದಕ್ಕೂ ಕಾರಣ ಉಂಟು' ಎಂದೆ ನಾನು.

'ಅದಕ್ಕೂ ಕಾರಣ ಉಂಟೇ? ಯಾವ ಕಾರಣ?' ಕುತೂಹಲದಿಂದ ಕೇಳಿದ ಭೀಮಸೇನ.

'ಅದನ್ನು ದೇವರ್ಷಿ ನಾರದರು ಹೇಳುತ್ತಾರೆ... ಅವರ ಬಾಯಿಯಿಂದಲೇ ಕೇಳು' ನಾರದರತ್ತ ನೋಡಿದೆ ನಾನು. ದೇವರ್ಷಿ ನಾರದರು 'ನಾರಾಯಣ, ನಾರಾಯಣಾ...' ಎಂದು ನಾರಾಯಣನ ಸ್ಮರಣೆ ಮಾಡಿ 'ಭೀಮಸೇನಾ... ಅವನು ಸಕಲ ನಾಟಕಗಳ ಸೂತ್ರಧಾರಿ. ನಾನು, ನೀನು, ಈ ಶಿಶುಪಾಲ ಎಲ್ಲರೂ ಅವನು ಆಡಿಸಿದಂತೆ ಆಡುವ ಪಾತ್ರಧಾರಿಗಳು.ಈ ಶಿಶುಪಾಲ ಹುಟ್ಟಿದಾಗ ಎಲ್ಲರಂತೆ ಇದ್ದಿರಲಿಲ್ಲ. ಎಲ್ಲರಿಗೂ ಎರಡು ನೇತ್ರಗಳಿದ್ದರೆ ಈ ಶಿಶುಪಾಲನಿಗೆ ಮೂರು ಕಣ್ಣುಗಳು ಇದ್ದವು. ಚತುರ್ಭುಜನಾಗಿದ್ದ ಈತ.

'ಜನಿಸಿದಾಗಲೆ ಭಾಳದಲಿ ಲೋಚನ
ಚತುರ್ಭುಜನಾದನದ್ಭುತ|
ನಿನದಲಿ ನೆಲ ಬಿರಿಯಲೊದರಿದ ನಂದು
ಬಾಲ್ಯದಲಿ|'

ಇವನ ಈ ಬಗೆಯ ವಿರೂಪವನ್ನು ನೋಡಿ ಇವನ ತಂದೆ ಧಾಮಘೋಷ ಇವನನ್ನು ತ್ಯಜಿಸಲು ನಿರ್ಧರಿಸಿದ. ಸೇವಕರನ್ನು ಕರೆದು 'ದಟ್ಟ ಕಾನನದ ನಡುವೆ ಈ ಹಸುಗೂಸನ್ನು ಬಿಟ್ಟು ಬನ್ನಿ' ಎಂದು ಆದೇಶಿಸಿದ. ಅಷ್ಟರಲ್ಲಿ ನಾನು ಅಲ್ಲಿಗೆ ಹೋದೆ. ನಾನು ಹೋದೆ ಎನ್ನುವುದಕ್ಕಿಂತ ಹಾಗೆ ಹೋಗಲು ನನಗೆ ಪ್ರೇರಣೆಯಾಯಿತು ಎನ್ನುವುದೇ ಸರಿ. ನಾನು ದಾಮಘೋಷನಿಗೆ ಹೇಳಿದೆ:

'ಈ ಮಗುವನ್ನು ತೊರೆಯದಿರು ದಾಮಘೋಷಾ..`ಈ ಶಿಶು ವಿಖ್ಯಾತನಹ' ಎಂದ ನಾನು ಧಾಮಘೋಷನ ಮಡದಿ ಶ್ರುತಶ್ರವೆಯತ್ತ ತಿರುಗಿ ಹೇಳಿದೆ: 'ನೀನಾರ ಹಸ್ತದೇಳಿತನನು ಕೊಟ್ಟಾಗಲಡಗುವಕ್ಷಿ ಭುಜಯುಗಳ...'

ಗಂಡ ಹೆಂಡತಿಗೆ ತುಸು ಸಮಾಧಾನವಾಯಿತು. ಮುಂದುವರಿದು ದೇವರ್ಷಿ ನಾರದರು ಹೇಳಿದರು:

'ಆದರೆ... ಯಾವನ ಸ್ಪರ್ಶಮಾತ್ರದಿಂದ ಇವನಮೂರನೆಯ ಕಣ್ಣು ಹಾಗೂ ಹೆಚ್ಚುವರಿ ಭುಜಗಳು ಕಾಣೆಯಾಗುವುದೋ ಆತನೇ ಈತನ ಮೃತ್ಯುವಿಗೂ ಕಾರಣನಾಗುತ್ತಾನೆ...'

'ಹಾಗೇನು...'? ಎಂದರು ದಂಪತಿಗಳು.

'ಮಾತ್ರವಲ್ಲಾ... ಈತನ ಶಿರ ಕಡಿದು ಅದು ಧರೆಗೆ ಬಿದ್ದರೆ ತಲೆ ಕಡಿದವನ ತಲೆ ಸಾವಿರ ಹೋಳಾಗುವುದು. ಧಾಮಘೋಷಾ.. ಕಡಿದ ತಲೆ ನಿನ್ನ ತೊಡೆಯ ಮೇಲೆ ಬಿದ್ದರೆ ಅದರಿಂದ ಇವನಿಗೂ ಮೋಕ್ಷ,ನಿನಗೂ ಮೋಕ್ಷ ದೊರಕುತ್ತದೆ...' ಎಂದ ನಾನು ಅಲ್ಲಿಂದ ನಿರ್ಗಮಿಸಿದೆ.

ಕುರುಕುಲ ಪಿತಾಮಹ ಭೀಷ್ಮಾಚಾರ್ಯರು ಹೇಳಿದರು: 'ಈ ಶಿಶುಪಾಲನನ್ನು ಕಾಣಲು ಬಂದವರ ಕೈಗಳಲಿನಿವ ತಾಯಿ ಶ್ರುತಶ್ರವೆ ಮಗುವನ್ನು ಇತ್ತಳು. ಯಾರ ಸ್ಪರ್ಶದಿಂದಲೂ ಇವನ ಹೆಚ್ಚುವರಿ ಕಣ್ಣು ಹಾಗೂ ಭುಜಗಳು ಅಡಗಲಿಲ್ಲ. ಆಗ 'ಇವನ ತಾಯ್ ತಮ್ಮತ್ತೆಯೆಂದುತ್ಸವದೊಳೀ ಮುರವೈರಿ ಬರಲು ದಿವನ ತಂದವನವ್ವ ಕೊಟ್ಟಳು ಹರಿಯ ಹಸ್ತದಲಿ...'

ಆಗ ನಡೆದದ್ದು ಚೋದ್ಯ. ಈ ಚೈದ್ಯನ ಅಧಿಕಾಕ್ಷಿ ಬಾಹುವು ನೀಗಿದವು.

ಇದನವ್ವೆ ಕಂಡುಬ್ಬೆಗದಲಿ ಕಮಲಾಕ್ಷನಂಘ್ರಿಗೆರಗಿ ಕೈಮುಗಿದು ಮೇಗರೆಯೆ ಮಾತಲ್ಲ ಬಾಲಕನಾಗು ಹೋಗಿನ ಕೊರತೆ ನಿನ್ನನು ತಾಗುವುದು ನೀ ಸೈರಿಸೆಂದಭಯವನು ಬೇಡಿದಳು...'

ಆಗ 'ಸೈರಿಸುವೆನಪರಾಧ ಶತವ ಕುಮಾರಕನ ತಾ ಕೊಲ್ಲೆನೆಂದು' ಈ ಶೌರಿಯು ತನ್ನ ಸೋದರತ್ತೆಗೆ ಭಾಷೆ ಕೊಟ್ಟ.

'ಹಾಗಾದರೆ ಇವನಿಂದ ಇನ್ನೂ ಶತಾಪರಾಧಗಳು ಆಗಿಲ್ಲವೇ?' ಭೀಮಸೇನ ಕೇಳಿದ.

'ಕೃಷ್ಣ ಇನ್ನೂ ಮೌನಿಯಾಗಿರುವುದು, ಇನ್ನೂ ಇವನನ್ನು ಕೊಲ್ಲಲು ಆತ ಮುಂದಾಗದಿರುವುದು ಇನ್ನೂ ಈ ಶಿಶುಪಾಲನಿಂದ ಶತಾಪರಾಧ ಆಗಿಲ್ಲ ಎಂದೇ ಅರ್ಥವಲ್ಲವೇ ಭೀಮಸೇನಾ' ನಗುತ್ತಾ ಅಂದರು ಆಚಾರ್ಯ ಭೀಷ್ಮರು.

'ಮತ್ತೆ ಆ ಕಾಲ ಯಾವಾಗ ಬರುತ್ತದೆ?' ಕೇಳಿದ ಭೀಮಸೇನ.

'ಈ ಶಿಶುಪಾಲ ಕೃಷ್ಣನನ್ನು ಬಯ್ಯಲು, ಹೀಯಾಳಿಸಲು, ನಿಂದಿಸಲು ಆರಂಭಿಸಿದ್ದು ರುಕ್ಮಿಣಿಯ ಸ್ವಯಂವರದ ಕಾಲದಿಂದ...' ನಾರದ ಮಹರ್ಷಿ ಅಂದರು.

'ಅಂದರೆ ಆ ವಿದರ್ಭ ರಾಜಕುಮಾರಿ ರುಕ್ಮಿಣಿಯ ಅಪಹರಣದ ಸಮಯದಿಂದ?' ಕೇಳಿದ ಭೀಮಸೇನ.

'ಅದು ಅಪಹರಣವಲ್ಲವೋ ಭೀಮಸೇನಾ. ಅಪಹರಣ ಎನ್ನುವ ಅಪವಾದ ಹೊರಿಸಿದವ ರುಕ್ಮಿಣಿಯ ಅಣ್ಣ ರುಕ್ಮ'

ಭೀಷ್ಮಾಚಾರ್ಯರು ನುಡಿದರು: 'ಕುಂಡಿನಾಪುರದ ಭೀಷ್ಮಕ ಮಹಾರಾಜ ಮತ್ತು ಮಹಾರಾಣಿ ಶುದ್ಧಿಮತಿ ದಂಪತಿಗಳಿಗೆ ರುಕ್ಮಿ ಮಗ, ರುಕ್ಮಿಣಿ ಮಗಳು. ಷೋಡಶ ವರ್ಷ ತುಂಬಿದ ಮಗಳಿಗೆ ವಿವಾಹ ಮಾಡಲು ಭೀಷ್ಮಕ ಮಹಾರಾಜ ಮುಂದಾದ. ಯಾದವ ಕುಲತಿಲಕ ಈ ಶ್ರೀಕೃಷ್ಣ ತನ್ನ ಮಗಳಿಗೆ ಯೋಗ್ಯನಾದ ವರ ಎಂದು ಮಹಾರಾಜ ಭೀಷ್ಮಕ ಮತ್ತು ಮಹಾರಾಣಿ ಶುದ್ಧಮತಿ ನಿರ್ಧರಿಸಿದರು. ಆದರೆ, ಯುವರಾಜನಾದ ರುಕ್ಮಿಯ ವಿಚಾರವೇ ಬೇರೆಯದಾಗಿತ್ತು. ಚೇದೀ ದೇಶದ ರಾಜ ಶಿಶುಪಾಲನಿಗೆ ತನ್ನ ತಂಗಿ ರುಕ್ಮಿಣಿಯನ್ನು ವಿವಾಹ ಮಾಡಿಕೊಡುವುದು ಆತನ ಇಚ್ಛೆಯಾಗಿತ್ತು.

'ದಿಬ್ಬಣ ಸಹಿತ ಬರಬೇಕು' ಎಂದು ಚೈದ್ಯನಿಗೆ ಸಂದೇಶವನ್ನೂ ಕಳುಹಿಸಿದ ಶಿಶುಪಾಲ. ರುಕ್ಮಿಣಿಗೋ ಶ್ರೀಕೃಷ್ಣನ ಪತ್ನಿ ತಾನಾಗಬೇಕು ಎಂಬ ಇಚ್ಛೆ. 'ಅಣ್ಣ ರುಕ್ಮಿ ತನ್ನನ್ನು ಚೇದಿ ದೊರೆ ಶಿಶುಪಾಲನಿಗೆ ಮದುವೆ ಮಾಡಿಕೊಡಲು ಮುಂದಾಗಿದ್ದಾನೆ. ನಿಮ್ಮನ್ನಲ್ಲದೆ ನಾನು ಬೇರೆ ಯಾರನ್ನೂ ವರಿಸಲಾರೆ. ನನ್ನನ್ನು ಕಾಪಾಡುವ ಹೊಣೆ ನಿಮ್ಮದು. ಪೂಜೆಯ ನೆವ ಹೊತ್ತು ಗಿರಿಜಾಲಯಕ್ಕೆ ಬಂದುನೀನು ನನ್ನನ್ನು ಕರೆದೊಯ್ಯಬೇಕು. ಇಲ್ಲವಾದರೆ ಸಾವೇ ನನಗೆ ಗತಿ' ಎಂದು ಓಲೆಯೊಂದನ್ನು ಬರೆದು ವಿಪ್ರೋತ್ತಮರೊಬ್ಬರ ಮೂಲಕ ಅದನ್ನು ಕೃಷ್ಣನಿಗೆ

